# ಹಾಯ್, ಯುಪಿಐ...

ಪಾವತಿ ವಿಧಾನವನ್ನು ಬೆರಳ ತುದಿಗೆ ತಂದು ನಿಲ್ಲಿಸಿದ್ದ ಎನ್‌ಪಿಸಿಐನ ಯುಪಿಐ ವ್ಯವಸ್ಥೆಯು ಈಗ ಧ್ವನಿಯ ಮೂಲಕವೂ ಪಾವತಿ ಮಾಡುವ ಅವಕಾಶವನ್ನು ಕಲ್ಪಿಸಲು ಸಜ್ಜಾಗುತ್ತಿದೆ.

■ **ಶಶಿಕುಮಾರ್ ಸಿ.**



ವಿದೇಶಿಗರೂ ಮೆಚ್ಚಿ ಕೊಂಡಾಡುತ್ತಿರುವ 'ಯುಪಿಐ' (ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್) ವ್ಯವಸ್ಥೆಯು ಡಿಜಿಟಲ್ ಇಂಡಿಯಾದ ಭಾಗವಾಗಿದ್ದು, ದೇಶದಲ್ಲಿ ಸಾಕಷ್ಟು ಜನಪ್ರಿಯಗೊಂಡಿದೆ. ಪಾವತಿ ವಿಧಾನವನ್ನು ಬೆರಳ ತುದಿಗೆ ತಂದು ನಿಲ್ಲಿಸಿರುವ 'ಯುಪಿಐ' ವ್ಯವಸ್ಥೆಯನ್ನು ಇನ್ನಷ್ಟು ಬಳಕೆದಾರ ಸ್ನೇಹಿಯಾಗಿಸಲು ಧ್ವನಿ ಆಧಾರಿತ ಪಾವತಿ ಸೇವೆ ಪರಿಚಯಿಸಲು 'ನ್ಯಾಷನಲ್ ಪೇಮೆಂಟ್ ಕಾರ್ಪೊರೇಷನ್ ಆಫ್ ಇಂಡಿಯಾ' (ಎನ್‌ಪಿಸಿಐ) ಮುಂದಾಗಿದೆ.

ಭಾರತದಲ್ಲಿ ಯುಪಿಐ ಪಾವತಿ ವ್ಯವಸ್ಥೆಯು ಹೊಸ ಕ್ರಾಂತಿಯನ್ನೇ ಸೃಷ್ಟಿಸಿದೆ. ಇದಕ್ಕನುಗುಣವಾಗಿ ಬಳಕೆದಾರರಿಗೆ ಅಗತ್ಯವೆನಿಸುವ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಧ್ವನಿ ಆಧಾರಿತ ಪಾವತಿ ವ್ಯವಸ್ಥೆಯ ಫೀಚರ್ ಅಭಿವೃದ್ಧಿಗೆ 'ಎನ್‌ಪಿಸಿಐ' ಕೈಹಾಕಿದೆ. ಇದರ ಮೂಲಕ ಬಳಕೆದಾರರು ಬರಹ (ಟೆಕ್ಸ್ಟ್) ಆಧಾರಿತ ಇನ್‌ಪುಟ್ ಬದಲು ವಾಯ್ಸ್ ಕಮಾಂಡ್ ನೀಡುವ ಮೂಲಕ ಹಣದ ವರ್ಗಾವಣೆ ವಹಿವಾಟು ನಡೆಸಬಹುದಾಗಿದೆ.

ಈಚೆಗೆ ನಡೆದ ಜಾಗತಿಕ 'ಫಿನ್ ಟೆಕ್' ಕಾರ್ಯಕ್ರಮದಲ್ಲಿ ಮಾತನಾಡಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್, ವಾಯ್ಸ್ ಕಮಾಂಡ್ ಮೂಲಕ ಹಣ ವರ್ಗಾವಣೆ ಮಾಡುವ ಯುಪಿಐ ವ್ಯವಸ್ಥೆ ಜಾರಿ ಬಗ್ಗೆ ಮಾಹಿತಿ ಹಂಚಿಕೊಂಡಿದ್ದರು. ಹೊಸ ಫೀಚರ್‌ನಿಂದಾಗಿ ಮೊಬೈಲ್ ಸೇರಿದಂತೆ ಡಿಜಿಟಲ್ ಬಳಕೆ ಬಗ್ಗೆ ಹೆಚ್ಚಿನ ಜ್ಞಾನವಿಲ್ಲದವರಿಗೆ ಹಾಗೂ ಹಿರಿಯ ನಾಗರಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ನೆರವಾಗಲಿದೆ. ಇಂಗ್ಲಿಷ್ ಭಾಷಾ ಜ್ಞಾನ ಹೊಂದಿಲ್ಲದವರಿಗೂ ಈ ವ್ಯವಸ್ಥೆಯಿಂದ ಅನುಕೂಲವಾಗಲಿದೆ.

ಈ ಸೌಲಭ್ಯ ಬಳಸಿಕೊಂಡು ಬಳಕೆದಾರರು ಯುಪಿಐ ಅಪ್ಲಿಕೇಷನ್‌ಗಳ ಮೂಲಕ ಪಾವತಿಗಳನ್ನು ಮಾಡಬಹುದು. ಮೊದಲ ಹಂತವಾಗಿ ಇಂಗ್ಲಿಷ್ ಹಾಗೂ ಹಿಂದಿಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ. ಕ್ರಮೇಣ ಪ್ರಾದೇಶಿಕ ಭಾಷೆಗಳಿಗೂ ಸೇವೆಯನ್ನು ವಿಸ್ತರಿಸಲಾಗುತ್ತದೆ.

ಬಳಕೆದಾರರು ಹಣ ವರ್ಗಾವಣೆ ಮಾಡಲು ಹಾಗೂ ಯುಪಿಐ ಪಿನ್ ನಮೂದಿಸಲು ವಾಯ್ಸ್ ಕಮಾಂಡ್ ನೀಡಿದರೆ ಸಾಕು, ಕ್ಷಣಾರ್ಧದಲ್ಲಿ ವಹಿವಾಟು ಪೂರ್ಣಗೊಳ್ಳುತ್ತದೆ. ಐಐಟಿ ಮದ್ರಾಸ್ ಎ14 ಭಾರತ್ ಭಾಷಿಣಿ ಪ್ರೋಗ್ರಾಮ್ ಸಹಭಾಗಿತ್ವದಲ್ಲಿ ಎನ್‌ಪಿಸಿಐ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಪಾವತಿ ಮಾಡೆಲ್‌ಗಳನ್ನು ಸಿದ್ಧಪಡಿಸಿದೆ.

ಎನ್‌ಪಿಸಿಐ ನೀಡಿರುವ ಮಾಹಿತಿ ಪ್ರಕಾರ, ಪ್ರತಿ ವರ್ಷ ಧ್ವನಿ ಆಧಾರಿತ ಹುಡುಕುವಿಕೆ (Voice search) ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಹೀಗಾಗಿ, ಯುಪಿಐ ವ್ಯವಸ್ಥೆಯಲ್ಲೂ ಧ್ವನಿ ಆಧಾರಿತ ಪಾವತಿ ವ್ಯವಸ್ಥೆಯನ್ನು ಜಾರಿಗೆ ತರಲಾಗುತ್ತಿದೆ.

ಧ್ವನಿ ಆಧಾರಿತ ವರ್ಗಾವಣೆ ವ್ಯವಸ್ಥೆ ಎರಡು ವಿಧದಲ್ಲಿ ಲಭ್ಯವಾಗಲಿದ್ದು, ಒಂದು ಆನ್ ಕಾಲ್ (oncall) ಅಂದರೆ ವಾಯ್ಸ್ ಕಾಲ್. ಮತ್ತೊಂದು, ಇನ್ ಆ್ಯಪ್ ಅಂದರೆ ಯುಪಿಐ ಅಪ್ಲಿಕೇಷನ್.

### ಆನ್ ಕಾಲ್‌ನಲ್ಲಿ ಹೇಗೆ?

ಈ ವಿಧದಲ್ಲಿ, ಬಳಕೆದಾರರು ಯುಪಿಐ ಧ್ವನಿ ಆಧಾರಿತ ಪಾವತಿ ವ್ಯವಸ್ಥೆಯ ಸಂಖ್ಯೆಗೆ ಕರೆ ಮಾಡಬೇಕು. ಆಗ ಅವರಿಗೆ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ಐವಿಆರ್ ಮೂಲಕ ಮಾರ್ಗದರ್ಶನ ನೀಡಲಾಗುತ್ತದೆ.

### ಇನ್ ಆ್ಯಪ್‌ನಲ್ಲಿ ಹೇಗೆ?

ಈ ವಿಧದಲ್ಲಿ, ಪಾವತಿ ಮಾಡಲು ಬಳಕೆದಾರರು ಯುಪಿಐ ಆ್ಯಪ್‌ಗಳನ್ನು ಬಳಸಬೇಕು. ಈ ಆ್ಯಪ್‌ಗಳಲ್ಲಿ ಲಭ್ಯವಾಗುವ ವಾಯ್ಸ್ ಪೇಮೆಂಟ್ ಆಯ್ಕೆಯನ್ನು ಸಕ್ರಿಯಗೊಳಿಸಿ ವಾಯ್ಸ್ ಕಮಾಂಡ್ ನೀಡುವ ಮೂಲಕ ಹಣ ವರ್ಗಾವಣೆ ಮಾಡಬಹುದು. ಬಳಕೆದಾರರ ಧ್ವನಿಯನ್ನು ಈ ವ್ಯವಸ್ಥೆಯು ಹೇಗೆ ಗುರುತಿಸಲಿದೆ ಎಂಬ ಬಗ್ಗೆ ಇನ್ನಷ್ಟೇ ಮಾಹಿತಿ ಹೊರಬೀಳಬೇಕಿದೆ. ■




### ಹೇಗೆ ಕಾರ್ಯನಿರ್ವಹಿಸುತ್ತದೆ?

- ಮೊದಲಿಗೆ ಬಳಕೆದಾರರ ಮಾತುಗಳನ್ನು ಡಿಜಿಟಲ್ ರೂಪಕ್ಕೆ ಬದಲಾಯಿಸಲಾಗುತ್ತದೆ.
- ಆಟೊಮ್ಯಾಟಿಕ್ ಆಗಿ ಮಾತನ್ನು ಗುರುತಿಸಿ, ವಾಯ್ಸ್ ಇನ್‌ಪುಟ್ ಅನ್ನು ಟೆಕ್ಸ್ಟ್ ರೂಪಕ್ಕೆ ಪರಿವರ್ತಿಸಲಾಗುತ್ತದೆ.
- ಎನ್‌ಎಲ್‌ಪಿ ಮಷಿನ್ ಭಾಷಾಂತರ ಕಾರ್ಯವನ್ನು ಮಾಡುತ್ತದೆ. ವಾಯ್ಸ್ ಇನ್‌ಪುಟ್ ಅನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಲಾಗುತ್ತದೆ.
- 'ಟೆಕ್ಸ್ಟ್ ಟು ಸ್ಪೀಚ್' ಆಯ್ಕೆಯು ಬಳಕೆದಾರರ ಉದ್ದೇಶ ಅರಿತುಕೊಳ್ಳುತ್ತದೆ.
- ಬಳಿಕ ಬಳಕೆದಾರರ ಜೊತೆಗೆ ವಾಯ್ಸ್ ಔಟ್‌ಪುಟ್ ಹಂಚಿಕೊಳ್ಳುತ್ತದೆ.
- ಪಿನ್ ಅಥವಾ ಪಾಸ್‌ವರ್ಡ್ ಅನ್ನೂ ಹೇಳಬೇಕಾದ್ದರಿಂದ ಇಲ್ಲಿ ಬಳಕೆದಾರರ ಫೋನ್‌ನಲ್ಲಿ ಅವರ ಹೊರತಾಗಿ ಬೇರೆಯವರು ಹಣ ವರ್ಗಾವಣೆ ಮಾಡಲು ಸಾಧ್ಯವಾಗುವುದಿಲ್ಲ.